


ನಾಸಿಕ್‌ನಲ್ಲಿಯ ಲೆಪ್ರಸಿ ಮಿಷನ್‌ನ 'ವೊಕೇಶನಲ್ ಟ್ರೈನಿಂಗ್ ಸೆಂಟರ್'



ಸುರೇಶ್ ಮತ್ತು ಮಂಗಳಾ ಅವರ ಸರಳ ವಿವಾಹ

ಕೇಳಿದರು. 11ನೇ ತರಗತಿಯವರೆಗೂ ಓದಿದ್ದ ಕಾರಣ, ಸುರೇಶ್ ಅವರಿಗೆ ಔಷಧಿಗಳನ್ನು ಹಂಚುವ ಕೆಲಸ ದೊರೆಯಿತು; ಜೊತೆಗೆ ತಾನಿದ್ದ ವಾರ್ಡ್‌ನ ಮೇಲ್ವಿಚಾರಣೆಯ ಜವಾಬ್ದಾರಿಯೂ ಅವರದಾಯಿತು. ಆ ಸಮಯದಲ್ಲಿ ಸುರೇಶ್ ಅವರಿಗೆ ಇನ್ನೂ ಪೆನ್ ಹಿಡಿಯಲು ಸಾಧ್ಯವಿರಲಿಲ್ಲ, ಊದಿಕೊಂಡು ಡೊಂಕಾದ ಬೆರಳುಗಳಲ್ಲಿ ಸಹಿ ಹಾಕಲು ಆಗುತ್ತಿರಲಿಲ್ಲ. ಹಾಗೆಂದೇ ಅವರು ಹೆಬ್ಬೆಟ್ಟು ಒತ್ತಿದ್ದರು. 'ವಿದ್ಯಾವಂತನಾದ ನಾನು ಅನಕ್ಷರಸ್ಥನಂತೆ ಹೆಬ್ಬೆಟ್ಟು ಒತ್ತುತ್ತಿರುವೆ' ಎಂಬುದೇ ಸುರೇಶ್ ಅವರಿಗೆ ತೀವ್ರ ಖೇದದ ವಿಷಯವಾಗಿತ್ತು. ಆದರೆ ಬದುಕು ಅವರತ್ತ ಅನಂತ ಕೃಪೆ ತೋರಿಸಿತ್ತು. ಮುಂದಿನ ಒಂದೂವರೆ ವರ್ಷಗಳಲ್ಲಿ ಚಿಕಿತ್ಸೆ ಬಲು ಪರಿಣಾಮಕಾರಿಯಾಗಿದ್ದು, ಅಷ್ಟು ತಡವಾಗಿ ಆಸ್ಪತ್ರೆಗೆ ಬಂದಿದ್ದರೂ, ಅವರ ಕುಷ್ಠರೋಗ ಸಂಪೂರ್ಣ ವಾಸಿಯಾಯಿತು!

ರೋಗ ಗುಣವಾದುದಕ್ಕೆ ಸಂಭ್ರಮಿಸಲು ಅವಕಾಶವಿರಲಿಲ್ಲ. ರೋಗ ಇದ್ದಷ್ಟು ದಿನ, ಆಸ್ಪತ್ರೆಯಲ್ಲಿ ಎಲ್ಲವೂ ಉಚಿತವಾಗಿ ನಡೆದಿತ್ತು. ಈಗ ಆಸ್ಪತ್ರೆಯಿಂದ ಹೊರಗೆ ಹೋಗುವುದಾದರೂ ಎಲ್ಲಿಗೆ? ಹೊರಜಗತ್ತು ತಮ್ಮನ್ನು ಶಾಶ್ವತವಾಗಿ ಕುಷ್ಠರೋಗಿಯೆಂದು ಹಣೆಪಟ್ಟಿ ಹಚ್ಚಿ ದೂರವಿಟ್ಟಿದೆಯೆಂದು ಅವರಿಗೆ ತಿಳಿದಿತ್ತು. ಬೇರೆ ಆಸ್ಪತ್ರೆಗಳಲ್ಲಿ ರೋಗಿಗಳು ಗುಣವಾಗಿ ಮನೆಗೆ ಹೋಗುವುದನ್ನೇ ಎದುರುನೋಡುತ್ತಾರೆ. ಆದರೆ ಕುಷ್ಠರೋಗದ ಆಸ್ಪತ್ರೆಯಲ್ಲಿ ರೋಗಿಗಳು ಒಮ್ಮೆ ಒಳಬಂದವರು, ಹೊರಗೆ ಹೋಗಲು ಹೆದರುತ್ತಾರೆ. ಆ ಹೊರಗಿನ ನಿಷ್ಕರುಣ ಸಮಾಜ ಇನ್ನೂ ಗುಣವಾಗಿಲ್ಲ. ಹಳ್ಳಿಗೆ ಹೋದರೆ ಗ್ರಾಮಸ್ಥರು ಹಳ್ಳಿಯಿಂದಲೇ ಹೊರ ಹಾಕುವಂತಹ ಪರಿಸ್ಥಿತಿ ಇದೆ ಎಂದು ಸುರೇಶ್ ಅವರಿಗೂ ಗೊತ್ತಿತ್ತು. ತನ್ನಿಂದ ತನ್ನ ಕುಟುಂಬದವರಿಗೂ ತೊಂದರೆಯಾಗಬಲ್ಲದು ಎಂಬ ಅರಿವಿತ್ತು. ಆದರೆ ಗುಣವಾದ ಮೇಲೆ ಆಸ್ಪತ್ರೆಯಲ್ಲಿ ಇರುವಂತೆಯೂ ಇರಲಿಲ್ಲ. ಇಂತಹ ವಿಷಮ ಪರಿಸ್ಥಿತಿಯಲ್ಲಿ ಸಿಕ್ಕಿಬಿದ್ದ ಸುರೇಶ್ ಅವರಿಗೆ, ಆಸ್ಪತ್ರೆಯ ಮೇಲ್ವಿಚಾರಕರೊಬ್ಬರು 'ನೀನು ನಾಸಿಕ್‌ನಲ್ಲಿಯ ಲೆಪ್ರಸಿ ಮಿಷನ್‌ನ ವೊಕೇಶನಲ್ ಟ್ರೈನಿಂಗ್ ಸೆಂಟರ್‌ಗೆ ಸೇರುವೆಯಾ?' ಎಂದು ಕೇಳಿದರು. ಅಂತಹುದೊಂದು ಸ್ಥಳವಿದೆ ಎಂದು ಕೂಡಾ ಅರಿಯದ ಸುರೇಶ್ ಸಂತಸದಿಂದ ಒಪ್ಪಿದರು. ಅಲ್ಲಿ 12 ಬಗೆಯ ವೃತ್ತಿಪರ ಕೌಶಲಗಳನ್ನು ಕಲಿಸುತ್ತಿದ್ದರು.

## ಉದ್ಯೋಗದ ಹಾದಿಯಲ್ಲಿ

19ನೇ ಶತಮಾನದಲ್ಲಿ ಇಂಗ್ಲೆಂಡ್‌ನಿಂದ ಬಂದ ಮಹಿಳೆ ರೋಸಲೀ ಹಾರ್ವೆ, 1898ರಲ್ಲಿ ನಾಸಿಕ್‌ನಲ್ಲಿ 'ಹೋಂ ಫಾರ್ ಲೆಪ್ರಸಿ ಪೇಷೆಂಟ್ಸ್' ಎಂದು ಕುಷ್ಠರೋಗಿಗಳಿಗೊಂದು ನೆಲೆಯನ್ನು

## ಬಂಗಾರದ ಹೂವು

ರಾಷ್ಟ್ರಪ್ರಶಸ್ತಿ ವಿಜೇತ 'ಬಂಗಾರದ ಹೂವು' (1967) ಕನ್ನಡ ಸಿನಿಮಾ ಕುಷ್ಠರೋಗ ವಾಸಿಯಾಗಬಲ್ಲದು ಎಂದು ತೋರಿಸಿತ್ತು. ಕುಷ್ಠರೋಗಿ ಮತ್ತೆ ಬದುಕಿಗೆ ಹಿಂತಿರುಗಲು ಬೇಕಾದ ಕೌಟುಂಬಿಕ ಹಾಗೂ ಸಾಮಾಜಿಕ ಪರಿಸರವನ್ನು ಸುಂದರವಾಗಿ ನಿರೂಪಿಸಿತ್ತು.

ಸಾಧಾರಣವಾಗಿ ಕುಷ್ಠರೋಗದ ಆರಂಭದ ಲಕ್ಷಣಗಳು – ಬಣ್ಣ ಬದಲಾದ ಚರ್ಮದ ಭಾಗ, ಒಂದಿಷ್ಟು ಮೇಲಕ್ಕೆ ಉಬ್ಬಿದಂತಿರುವ ಮಚ್ಚೆಗಳು, ಆ ಜಾಗದಲ್ಲಿ ಸ್ಪರ್ಶಜ್ಞಾನ ಇಲ್ಲದೆ ಇರುವುದು. ಆರಂಭದಲ್ಲಿಯೇ ರೋಗವನ್ನು ಗುರುತಿಸಿ ಚಿಕಿತ್ಸೆ ಪಡೆದರೆ, ಅಂಗಾಂಗಗಳ ನ್ಯೂನತೆಯಿಂದ ತಪ್ಪಿಸಿಕೊಳ್ಳಬಹುದು.